ಮಂತ್ರಿಗಳಿಗೂ ನನಗೂ ವ್ಯತ್ಯಾಸ ಏನೂ ಇಲ್ಲ. ನನ್ನ ಆಥವಾ ಅವರ ನಿಲುವಿನಲ್ಲಿ ವ್ಯತ್ಯಾಸ ಇಲ್ಲ. ಆಥವಾ ನನ್ನ ಇಲಾಖೆಯ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕಂತಹದ್ದರಲ್ಲಿ ಯಾವುದೇ ಹಸ್ತಕ್ಷೇಪ, ಕಡಿವಾಣ ನನಗೆ ಇಲ್ಲ ಎಂಬ ವಿಚಾರವನ್ನು ಇಲ್ಲಿ ಹೇಳುವುನಕ್ಕೆ ಇಷ್ಟಪಡುತ್ತೇನೆ. ಅವರೇ ಈ ಬಗ್ಗೆ ಜೂನ್ ೧೯೮೬ರಲ್ಲಿ ಪತ್ರ ಬರೆದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಬರೆದಿರುವ ಪತ್ರ. reads like this:

> " Karnataka feels that it is in opportune to constitute a tribunal at this juncture. Constitution of tribunal, if it is inevitable, should be done only after the formulation of the national water policy which is in the offing. "

ಪೂರ್ತಿ ಬೇಕಾದರೆ, ಅದನ್ನು ಸದನದಲ್ಲಿ ಮಂಡಿಸುತ್ತೇನೆ. ಆ ಪತ್ರದ ಲಾಸ್ಟ್ ಸೆಂಟನ್ಸ್ ಓದುತ್ತೇನೆ. ಇಫ್ ಇಟ್ ಈಸ್ ಇನ್ ಏವಿಟಿಬಲ್ ಅದರ ಜೊತೆಗೆ ನಾವು ಹೇಳುವುದನ್ನೆಲ್ಲಾ ಹೇಳಿದ್ದೇವೆ. Tamil Nadu's demand for constitution of tribunal before national water policy is formulated meant to stop development in other, States. ದೀರ್ಘವಾಗಿ ಹೇಳಿದ್ದೇವೆ. ಇದರಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಇದರ ಜೊತೆಗೆ ಮತ್ತೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಿಂದೆಯೂ ಕೂಡ ನಮ್ಮವರು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಈ ರಾಜ್ಯದಲ್ಲಿ ಹಿಂದೆ ಅಧಿಕಾರದಲ್ಲಿದ್ದಂತಹ ಯಾರೂ ಬಿಟ್ಟು ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇವೊತ್ತಿನ ನಮ್ಮ ನೀತಿಯೂ ಕೂಡ ನೆರೆ ರಾಜ್ಯಗಳ ಜೊತೆಗೆ ಪರಸ್ಪರ ಸಹಕಾರವನ್ನು ಇಟ್ಟು ಕೊಳ್ಳಬೇಕು, ಪರಸ್ಪರ ಸೌಹಾರ್ದವನ್ನು ಇಟ್ಟುಕೊಳ್ಳಬೇಕೆಂಬುದೇ ಆಗಿದೆ. ಆದರೆ, ಆ ರೀತಿಯ ಸೌಹಾರ್ದ ಹಾಗೂ ಸಹಕಾರ ಸಭ್ಯತೆಯ ಚೌಕಟ್ಟಿನಲ್ಲಿ ಈ ರಾಜ್ಯಕ್ಕೆ ಹಾನಿಯನ್ನು ತರತಕ್ಕಂತಹ ಒಂದಂಶ ಕೂಡ ಸಾಧ್ಯವಾಗುವುದಿಲ್ಲ. ಸಾಧ್ಯವೇ ಇಲ್ಲ ಅದರ ಬಗ್ಗೆ ಅಷ್ಟೇ ಬಿಗಿಯಾದ ಧೋರಣೆಯನ್ನು ಈ ಸರ್ಕಾರ ತಳೆಯುತ್ತದೆ. ಇದನ್ನು ಬಲಹೀನತೆ ಎಂದು ಯಾರೂ ಭಾವಿಸಿಕೊಳ್ಳ ಬಾರದು. ಈ ರಾಜ್ಯದ ಹನಿ ಹನಿ ನೀರನ್ನೂ ಉಳಿಸತಕ್ಕಂತಹದ್ದರಲ್ಲಿ ಸರ್ವ ಪ್ರಯತ್ನವನ್ನು ಈ ಸರ್ಕಾರ ತನ್ನ ಸರ್ವಶಕ್ತಿಯನ್ನು ಉಪಯೋಗ ಮಾಡಿ ಕೆಲಸ ಮಾಡುತ್ತದೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ತುಮಕೂರು ಜಿಲ್ಲೆಯಲ್ಲಿ ಬರಗಾಲದ ಕಾಮಗಾರಿಗಳ ಬಾಕಿ ಇರುವ ಬಿಲ್‌ಗಳನ್ನು ಚುಕ್ತ ಮಾಡುವುದು

ಶ್ರೀ ಬಿ. ಲಕ್ಕಪ್ಪ.—ತುಮಕೂರು ಜಿಲ್ಲೆಯಲ್ಲಿ ಬರಗಾಲದ ಕಾಮಗಾರಿಗಳನ್ನು ನಡೆಸುವಾಗ ಬಾಕಿ ಇರುವ ಬಿಲ್‌ಗಳನ್ನು ಚುಕ್ತ ಮಾಡುವ ಬಗ್ಗೆ ನಾನು ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—೧-೪-೧೯೮೬ ರಿಂದ ೩೦-೬-೧೯೮೬ ರವರೆಗೆ ಕೇಂದ್ರ ಸರಕಾರದ ಸಹಾಯದಿಂದ ಬರಗಾಲ ಪರಿಹಾರ ಕಾಮಗಾರಿಗಳನ್ನು ಮುಂದುವರಿಸಿಕೊಂಡು ಹೋಗುತ್ತಾ, ಹಲವಾರು ಕೆಲಸಗಳನ್ನು ಜಿಲ್ಲಾಧಿಕಾರಿಗಳು ನಡೆಸಿಕೊಂಡು ಬಂದಿರುತ್ತಾರೆ. ಈ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ಕೆಲಸಗಳು ಮುಗಿದ ಬಳಿಕ ಬಿಲ್ಲುಗಳನ್ನು ಚುಕ್ತಾ ಮಾಡುವ ಅವಶ್ಯಕತೆ ಇರುವುದು ಸಹಜ. ಜೂನ್ ತಿಂಗಳ ಮೂರು ಮತ್ತು ನಾಲ್ಕನೇ ವಾರದಲ್ಲಿ ಆದ ಕೆಲಸಗಳ ಕೂಲಿ ಹಣವು ಬಾಕಿ ಇದ್ದಲ್ಲಿ ಅದನ್ನು ಚುಕ್ತಾ ಮಾಡಲು ಸರಕಾರವು ಬದ್ಧವಾಗಿದೆ. ಅಂತೆಯೇ ತುಮಕೂರು ಜಿಲ್ಲೆಗೆ ಸಂಬಂಧಪಟ್ಟ ೨೮.೨೫ ಲಕ್ಷರೂಪಾಯಿಗಳ ಕೂಲಿ ಬಾಕಿ ಬಿಲ್ಲುಗಳು ಉಳಿದಿರುವ ಬಗ್ಗೆ ತುಮಕೂರು ಜಿಲ್ಲಾಧಿಕಾರಿಗಳಿಂದ ವರದಿ ಬಂದಿದೆ. ಈ ಹಣವನ್ನು ಬಿಡುಗಡೆ ಮಾಡಲು ಸರಕಾರವು ಈಗಾಗಲೇ ತೀರ್ಮಾನ ಕೈಗೊಂಡಿದೆ. ಸದ್ಯದಲ್ಲೇ ಈ ಹಣವು ಬಿಡುಗಡೆ ಆಗಲಿದ್ದು ಕೂಲಿಗಾರರ ವೇತನವನ್ನು ಅತೀ ಶೀಘ್ರದಲ್ಲಿ ಪಾವತಿ ಮಾಡಲಾಗುವುದು. ಈ ಕೆಲಸಗಳಲ್ಲಿ ಕೂಲಿ ಹೊರತುಪಡಿಸಿ ಇತರ ಬಾಕಿ ಬಿಲ್ಲುಗಳ ಬಗ್ಗೆ ಹೆಚ್ಚಿನ ಹೆಚ್ಚಿನ ಹಣದ ಅಗತ್ಯತೆ ಉಂಟಾದಲ್ಲಿ ಯೋಜನಾ ಕಾರ್ಯಕ್ರಮಗಳಾದ ಎನ್. ಆರ್. ಇ. ಪಿ., ಆರ್. ಎಲ್. ಇ. ಪಿ. ಮತ್ತು ಇನ್ನಿತರ ಇಲಾಖೆಗಳ ಸಾಮಾನ್ಯ ಆಯವ್ಯಯದ ಹಣದಿಂದ ಭರಿಸತಕ್ಕದೆಂದು ಕೂಡಾ ತೀರ್ಮಾನ ಕೈಗೊಳ್ಳಲಾಗಿದೆ.

ಶ್ರೀ ಬಿ. ಲಕ್ಕಪ್ಪ —ಮಾನ್ಯ ಅಧ್ಯಕ್ಷರೆ, ಕಳೆದ ಸಾರಿ ಇದೆ ಸಭೆಯಲ್ಲಿ ಈ ರಾಜ್ಯದಲ್ಲಿ ಭೀಕರ ಬರಗಾಲ ಇದ್ದಂತಹ ಸಂದರ್ಭದಲ್ಲಿ ಆದಂತಹ ಚರ್ಚೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ರಾಜ್ಯದಲ್ಲಿರುವ ಪ್ರತಿಯೊಬ್ಬರೂ, ಉದ್ಯೋಗವನ್ನು ಬಯಸಿ ಬರುವಂತಹವರಿಗೆ ಉದ್ಯೋಗವನ್ನು ಎಷ್ಟೇ ಕಷ್ಟವಾದರೂ ಒದಗಿಸುತ್ತೇವೆ, ಸಂತರ ಅವರಿಗೆ ವಾರಕ್ಕೊಂದು ಸಾಲ ಕೂಲಿಯನ್ನು ಕೊಡತಕ್ಕ ಕಾರ್ಯವನ್ನು ಬಹಳ ಪರಿಣಾಮಕಾರಿಯಾಗಿ ಮಾಡುತ್ತೇವೆ ಎಂದು ಹೇಳಿದರು. ಕೈಯಲ್ಲಿ ಕೆಲಸ ಇಲ್ಲದೆ ಜನರನ್ನು ಹಸಿವಿನಿಂದ ಸಾಯುವುದಕ್ಕೆ ಈ ರಾಜ್ಯದಲ್ಲಿ ಬಿಡುವುದಿಲ್ಲ ಎಂದು ಹೇಳಿದರು. ಜೂನ್ ೩೦ಕ್ಕೆ ಬರ ಪರಿಹಾರ ಕಾಮಗಾರಿಗಳನ್ನು ನಿಲ್ಲಿಸಲಾಗಿದೆ. ನಿಲ್ಲಿಸತಕ್ಕಂತಹ ಕಾಲದಲ್ಲಿ ತುಮಕೂರು ಜಿಲ್ಲೆಯಲ್ಲಿ ಮಾನ್ಯ ಸಚಿವರೇ ಒಪ್ಪಿಕೊಂಡಿರುವ ರೀತಿ ೨೮.೨೫ ಲಕ್ಷ ರೂಪಾಯಿಗಳ ವರೆಗೆ ಜನರಿಗೆ ಕೂಲಿ ಕೊಡತಕ್ಕಂಥಹದ್ದು ಬಾಕಿ ಇದೆ. ಅಂದರೆ ಮೊದಲು ಮಂತ್ರಿಗಳು ಹೇಳಿದ ರೀತಿಯಲ್ಲಿ ಆವರ ಕಾರ್ಯಕ್ರಮದ ಪ್ರಕಾರ ವಾರಕ್ಕೊಂದು ಸಲ ಕೂಲಿ ಕೊಡಬೇಕು ಎಂಬುದಾಗಿ ಹೇಳಿದ್ದಕ್ಕೆ ಅರ್ಥವಿಲ್ಲ ವಾರಕ್ಕೊಮ್ಮೆ ಕೂಲಿಯನ್ನು ಕೊಡಬೇಕಾಗಿತ್ತು ಎಂದರೆ, ಇಷ್ಟು ದಿವಸದ ವರೆಗೂ ಬಾಕಿಯಾಗಿ ನಿಂತಿರುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ನೋಡಿದರೆ ಯಾವ ಬಡ ಕೂಲಿಕಾರ ಕೆಲಸ ಮಾಡಿದ್ದಾನೋ ಅವರಿಗೆ ಕೂಲಿ ಕೊಟ್ಟಿಲ್ಲ, ಎಂಬುದು ಇದರಿಂದ ವೇದ್ಯವಾಗುತ್ತದೆ. ಎನ್. ಎಂ. ಆರ್ ನಲ್ಲಿ ಕೂಲಿಕಾರರು ೧೦ ದಿವಸ ಕೆಲಸ ಮಾಡಿದ್ದರೆ, ೩೦ ದಿವಸವೂ ಕೆಲಸ ಮಾಡಿದ್ದಾರೆ, ೩೦ ದಿವಸವೂ ಕೆಲಸ ಮಾಡಿದ್ದಾರೆಂದು ಅಧಿಕಾರಿಗಳು ಬರೆದು ಕೊಂಡಿದ್ದಾರೆ. ಇದರಲ್ಲಿ ನೂರಾರು ಕೋಟಿ ರೂಪಾಯಿಗಳು ದುರುಪಯೋಗವಾಗುತ್ತಿದೆ. ಇದರಲ್ಲಿ ಬಹುಪಾಲು ಹಣ ಯಾವ ಬಡವರಿಗೆ ಸಿಕ್ಕಬೇಕಾಗಿತ್ತು, ಆದು ಅವರಿಗೆ ಸಿಕ್ಕದೆ, ಬರೀ ಅಧಿಕಾರಿಗಳ ಪಾಲಾಗಿದೆ. ಆ ರೀತಿಯ ಎನ್. ಎಂ. ಆರ್. ನಲ್ಲಿ ಕೂಲಿಕಾರರ ಸಹಿಯನ್ನು ಈಗಾಗಲೇ ತೆಗೆದುಕೊಂಡು ಇಟ್ಟುಕೊಂಡಿದ್ದಾರೆ. ಬಾಕಿ ಇರತಕ್ಕಂತಹ ಹಣವನ್ನು ಕೊಟ್ಟು ಮೇಲೆ ಬಿಲ್ಲು ಪಾಸಾಗುತ್ತದೆ. ಆ ಹಣ ಯಾರಿಗೆ ಹೋಗುತ್ತದೆ. ಎಂಬುದರ ಬಗ್ಗೆ ವಿವರವಾಗಿ ತನಿಖೆಯನ್ನು ಮಾಡಬೇಕು. ಇದರ ಬಗ್ಗೆ ಸದನದ ಸಮಿತಿಯನ್ನು ಮಾಡಲೇಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಕೇಳತಕ್ಕಂತಹ ಪ್ರಶ್ನೆಗೆ ಸಂಬಂಧ ಪಟ್ಟಂತಹ ಜಿಲ್ಲೆಗೆ ಬಿಡುಗಡೆ ಮಾಡಿದಂತಹ ಹಣಕ್ಕಿಂತ ಹೆಚ್ಚಿನ ಕೆಲಸಗಳಾಗಿವೆ. ಇದೇ ರೀತಿ ಬೇರೆ ಬೇರೆ ಜಿಲ್ಲೆಗಳಲ್ಲೂ ಮಾಡಿದ್ದಾರೆ. ಶಾಸಕರ ಒತ್ತಾಯದಿಂದ, ಇದರ ಜೊತೆಗೆ ಅಲ್ಲಿಯ ಸಾರ್ವಜನಿಕ ಒತ್ತಾಯದ ಮೇರೆಗೆ ನಿಗದಿಮಾಡಿದ ಹಣಕ್ಕಿಂತ ೨೮.೨೫ ಲಕ್ಷ ರೂಪಾಯಿಗಳ ಹೆಚ್ಚು ಕಾಮಗಾರಿಗಳನ್ನು ಮಾಡಿದ್ದಾರೆ. ಅದನ್ನು ಕೂಡಲೇ ಬಿಡುಗಡೆ ಮಾಡತಕ್ಕಂತಹ ವ್ಯವಸ್ಥೆ ಮಾಡಿದ್ದೇನೆ. ಜೂನ್ ೩೦ಕ್ಕೆ ಕೆಲಸಕಾರ್ಯಗಳನ್ನು ನಿಲ್ಲಿಸಬೇಕೆಂಬುದು ಕೇಂದ್ರ ಸರ್ಕಾರದ ಆದೇಶ ಇದೆ. ಯಾವ ಯಾವ ರಾಜ್ಯಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಬೇಕು ? ಕೆಲಸವನ್ನು ಯಾವಾಗ ಮುಗಿಸಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಆ ರೀತಿಯ ಆದೇಶವನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಆದರೂ ಕೆಲವು ಕಡೆ ಜುಲೈ ತಿಂಗಳಲ್ಲಿ ಕೆಲಸ ಮಾಡಿದ್ದಾರೆ. ಕೆಲಸ ಮಾಡಿದ ಮೇಲೆ ಹಣವನ್ನು ಕೊಡಬೇಕು. ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತೇನೆ. ಇನ್ನು ಅವ್ಯವಹಾರ ಎನ್ನತಕ್ಕಂತಹ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಕಾಮಗಾರಿಗಳನ್ನು ಇನ್‌ಸ್ಪೆಕ್ಷನ್ ಮಾಡತಕ್ಕಂತಹ ಕೂಲಿಗಾರರ ಪಟ್ಟಿಯನ್ನು ತೆಗೆದುಕೊಳ್ಳತಕ್ಕಂತಹ ಅಧಿಕಾರವನ್ನು ತಮಗೆ ಕೊಟ್ಟಿದ್ದೇನೆ. ಆ ಬಗ್ಗೆ ಮಾನ್ಯ ಸದಸ್ಯರು ನಿರ್ದಿಷ್ಟವಾದ ವಿವರಗಳನ್ನು ಕೊಟ್ಟರೆ, ವಿಚಾರಣೆಯನ್ನು ಮಾಡಿಸುತ್ತೇನೆ. ತಪ್ಪಿತಸ್ಥರ ಮೇಲೆ ಕ್ರಮವನ್ನೂ ತೆಗೆದುಕೊಳ್ಳುತ್ತೇನೆ. ಆ ವಿವರಗಳನ್ನು ಮಾನ್ಯ ಸದಸ್ಯರು ಕೊಡಬೇಕು.

ಶ್ರೀ ಬಿ. ಲಕ್ಕಪ್ಪ.—ಬರ ಪರಿಹಾರ ಕಾಮಗಾರಿಯಲ್ಲಿ ಮಾಡಿರತಕ್ಕಂತಹ ಕೆಲಸ ಕಾರ್ಯಗಳು, ಇದರಲ್ಲಿ ಇನ್ನೂ ಬಾಕಿ ಇರತಕ್ಕಂತಹ ಪರಿಸ್ಥಿತಿ ಏನಿದೆ, ಇದನ್ನು ನೋಡಿದಾಗ ಯಾರು ನಿಜವಾಗಿಯೂ ಕೂಲಿಯನ್ನು ಮಾಡಿದ್ದಾರೆ, ಅವರಿಗೆ ಕೂಲಿಯನ್ನು ಕೊಡದೆ ಕೆಲಸವನ್ನು ನಿಲ್ಲಿಸಿದ್ದಾರೆಂಬುದು ಇದರಿಂದ ವೇದ್ಯವಾಗುತ್ತದೆ. ಕಾಮಗಾರಿ ನಡೆದಿದೆ ಎಂದು ಹೇಳುವುದಕ್ಕಿಂತ ಬದಲಾಗಿ, ಯಾರಿಗೆ ಇದರಿಂದ ಪರಿಹಾರ ಕೊಡಬೇಕಾಗಿತ್ತೋ, ಅವರಿಗೆ ಈ ಒಂದು ಪರಿಸ್ಥಿತಿಯಲ್ಲಿ ಕೊಟ್ಟಿಲ್ಲ ಎನ್ನತಕ್ಕಂತಹದ್ದು. ಸರ್ಕಾರ ಸಮರ್ಪಕವಾಗಿ ಅವರಿಗೆ ಕೂಲಿಸಿಕ್ಕತಕ್ಕಂತಹ ವ್ಯವಸ್ಥೆಯನ್ನು ಮಾಡಿಲ್ಲ. ಇದಕ್ಕೆ ಇಪ್ಪತ್ತಿನ ದಿವಸ ಸರ್ಕಾರ ಕ್ಷಮೆಯನ್ನು ಕೇಳಬೇಕಾಗುತ್ತದೆ. ಇದರ ಜೊತೆಗೆ ಇದರಲ್ಲಿ ಆಗಿರತಕ್ಕ ಅವ್ಯವಹಾರದ ಬಗ್ಗೆ ತನಿಖೆಯನ್ನು ಮಾಡಬೇಕಾಗುತ್ತದೆ.

೧-೦೦ ಪಿ.ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕ್ಷಮೆ ಕೇಳುವ ಪ್ರಶ್ನೆ ಇಲ್ಲ. ಸರ್ಕಾರ ಎಷ್ಟೋ ಆಜ್ಞೆಗಳನ್ನು ಮಾಡಿದ್ದರೂ ಕಾಂಟ್ರಾಕ್ಟರ್ ಮೂಲಕ ಕೆಲಸ ಮಾಡಿಸಿದ್ದೇವೆಂದು ಈ ಸಭೆಯಲ್ಲಿ ಹೇಳುತ್ತಿದ್ದೇನೆ. ನಿಮ್ಮ ತಾಲ್ಲೂಕಿನಲ್ಲಿ ಕೂಡ ಕಾಂಟ್ರಾಕ್ಟರಿಗೆ ಕೊಡತಕ್ಕ ಹಣ ಬಾಕಿ ಇದೆ. ಈ ವಿಚಾರವನ್ನು ಸಭೆಯಲ್ಲಿ ಚರ್ಚೆ ಮಾಡಿದರೆ ಸರ್ಕಾರಕ್ಕೂ ತೊಂದರೆಯಾಗುತ್ತದೆ, ನಿಮಗೂ ತೊಂದರೆಯಾಗುತ್ತದೆಂದು ಹೇಳಿದೆ.

ಶ್ರೀ ಕೆ. ಬಿ. ಕೋಳಿವಾಡ.—ನಾನೂ ಸಹ ಆ ನೋಟೀಸಿಗೆ ಸಹಿ ಮಾಡಿರುವುದರಿಂದ ನಾನೊಂದು ಪ್ರಶ್ನೆ ಕೇಳಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೊಬ್ಬರದ್ದೇ ಸಹಿ ಇದೆ. ನೀವು ಬೇಕಾದರೆ ಮತ್ತೊಂದು ನೋಟೀಸ್ ಕೊಡಿ, ನೋಡೋಣ.

ಶ್ರೀ ಬಿ. ಲಕ್ಕಪ್ಪ.—ಈ ಕಾಮಗಾರಿಗಳನ್ನು ಕಾಂಟ್ರಾಕ್ಟರಿಗೆ ಎಂಟ್ರಸ್ಟ್ ಮಾಡಿ ಮಾಡಿಸಿದ್ದಾರೆ. ಇಲ್ಲದೆ ಹೋದರೆ ಅಧಿಕಾರಿಗಳು ಹಣ ಡ್ರಾ ಮಾಡಿ ಯಾರಿಗೆ ಕೊಡುತ್ತಾರೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಬರಗಾಲದ ಬಗ್ಗೆ ವಿವರವಾಗಿ ಹೇಳಿಕೆ ಕೊಡುವವನಿದ್ದೇನೆ. ಆಗ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡೋಣ. ಅದು ಲಕ್ಕಪ್ಪನವರಿಗೂ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಕೆಲಸ ಆದಮೇಲೆ ಹಣ ಕೊಡಬೇಕು. ಆ ಬಗ್ಗೆ ವಿವರವಾದ ಹೇಳಿಕೆ ಕೊಡುತ್ತೇನೆ. ಈ ವರ್ಷ ಕೆಲವು ಭಾಗದಲ್ಲಿ ಮಳೆ ಆಗಿಲ್ಲ. ಆ ಬಗ್ಗೆ ಈ ಮನೆಯಲ್ಲಿ ಹೇಳಿಕೆ ನೀಡಿದ ಮೇಲೆ ವಿವರವಾಗಿ ಚರ್ಚಿಸೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಕಾಂಟ್ರಾಕ್ಟ್ ನೌಕರರು ಹತ್ತು ಸಾವಿರ ಜನ ಬರುತ್ತಿದ್ದಾರೆ...

ಅಧ್ಯಕ್ಷರು.—ನೀವು ಈಗ ಕುಳಿತುಕೊಳ್ಳಿ. ನೀವು ಏನು ಹೇಳಿದರೂ ಅದು ರೆಕಾರ್ಡ್ ಆಗುವುದಿಲ್ಲ. ನೀವು ರೂಲ್ ೩೫ರ ಪ್ರಕಾರ ನೋಟೀಸ್ ಕೊಟ್ಟಿದ್ದೀರಲ್ಲ ಅದನ್ನು ನಾಳೆ ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಬೇಕಲ್ಲವೆ? ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಒಂದು ಅಡ್ಜರ್ನ್‌ಮೆಂಟ್ ನೋಷನ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ನೀವು ಕೋರ್ಟಿನಲ್ಲಿ ಹೇಗೆ ವಕಾಲತ್ತು ಮಾಡುತ್ತಿದ್ದರಿ? ಈಗ ೩೫ರ ನಿಯಮದ ಪ್ರಶ್ನೆಗಳನ್ನು ತೆಗೆದುಕೊಳ್ಳಬೇಕು, ಮಂತ್ರಿಗಳೇನೋ ಹೇಳಿಕೆ ಕೊಡಬೇಕೆಂದಿದ್ದಾರೆ. ದಯವಿಟ್ಟು ತಾವು ಕುಳಿತುಕೊಳ್ಳಿ.

ಮಂತ್ರಿಯವರಿಂದ ಹೇಳಿಕೆ

ಕೃಷ್ಣಾ ಬೇಸಿನ್ ಯೋಜನೆಗಳಿಗೆ ಹಣ ಒದಗಿಸುವ ಬಗ್ಗೆ ಪತ್ರಿಕೆಯಲ್ಲಿ ತಪ್ಪು ವರದಿ ಮಾಡಿರುವ ಬಗ್ಗೆ ಸ್ಪಷ್ಟೀಕರಣ

ಶ್ರೀ ಹೆಚ್. ಡಿ. ದೇವೇಗೌಡ.—ನಿನ್ನೆ ಸದನದಲ್ಲಿ ರೂಲ್ ೩೫ರ ವ್ಯಾಪ್ತಿಯಲ್ಲಿ ಕೃಷ್ಣಾ ನದಿಗೆ ಸಂಬಂಧಪಟ್ಟ ಹಾಗೆ ೩ ಯೋಜನೆಗಳನ್ನು ತೆಗೆದುಕೊಳ್ಳತಕ್ಕದ್ದರ ಬಗ್ಗೆ ಈ ಸದನದ ಗಮನವನ್ನು ಶ್ರೀ ಕಡಪಟ್ಟಿಯವರು ಸೆಳೆಯತಕ್ಕ ಪ್ರಯತ್ನ ಮಾಡಿದರು. ನಾನು ಉತ್ತರಿಸತಕ್ಕ ಕಾಲದಲ್ಲಿ, ನಾನು ತಮ್ಮ ಘನ ಅಧ್ಯಕ್ಷತೆಯಲ್ಲಿ ಉತ್ತರಿಸಿದ್ದೇನೆ. ಆದರೆ ಪತ್ರಿಕಾ ವರದಿಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸಭೆಯ ಕಾರ್ಯಕಲಾಪದ ವರದಿಯನ್ನು ವಿಕೃತಗೊಳಿಸಿ, ವ್ಯಕ್ತಿಯ ತೇಜೋವಧೆಯನ್ನು ಮಾಡತಕ್ಕ ಅಪಪ್ರವೃತ್ತಿ ಕಾರ್ಯವನ್ನು ಯಾರಾದರೂ ಮಾಡಿದರೆ ಬಹುಶಃ ಈ ಸಭೆಯ ವಿಶ್ವಾಸ ಹೋಗುತ್ತದೆ. ಹೊರಗಡೆ ಅವರು ಏನಾದರೂ ಬರೆದುಕೊಳ್ಳಲಿ, ಅವರವರ ಖುಷಿ ಬರೆದುಕೊಳ್ಳುತ್ತಾರೆ. ರಾಜಕೀಯವಾಗಿ ಯಾರನ್ನು ಮುಗಿಸಬೇಕು, ಯಾರನ್ನು ಎತ್ತ ಬೇಕೆಂಬ ಸಂಚು, ಪಿತೂರಿ ನಡೆಯುತ್ತದೆ. ಅದು ಈ ದೇಶದಲ್ಲಿ ನಡೆಯುವುದು ಸಹಜ. ಬಹುಕಾಲದಿಂದ ನಡೆದುಕೊಂಡು ಬಂದಿದೆ. ಆದರೆ ಈ ಸದನದಲ್ಲಿ ನಡೆಯುವ ಕಾರ್ಯಕಲಾಪ ತಮ್ಮ ಘನ ಅಧ್ಯಕ್ಷತೆಯಲ್ಲಿ ವಿಕೃತವಾಗಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಪತ್ರಿಕೆಯ ವರದಿ ಈ ರೀತಿ ಇದೆ. "House corners Deve Gowda." I am still sitting in the fifth seat in the front row. ನಾನು ಹಿಂದೇ ಸೀಟಿನಲ್ಲಿ ಕುಳಿತಿದ್ದೇನೆ. ಕಾರ್ನರ್ ಮಾಡಿದರೆ